‘ಅಲ್ಲಿ ಸಂಬಂಧಿಕರು ಇರಬೇಕು?’ ಇವರಿಗೆ ಬೆಂಗಳೂರಿನಲ್ಲಿ ಸಂಬಂಧಿಕರಿರಬೇಕು, ಅಲ್ಲಿಗೆ ಇವರು ಹೋದ ನಂತರ, ಇವರನ್ನು ಕರೆದುಕೊಂಡು ಹೋಗಲು ಬರುತ್ತಾರೆಂದು ತಿಳಿದೆ.

‘ಇಲ್ಲ, ಬೆಂಗಳೂರಿನಲ್ಲಿ ನಮಗ್ಯಾರೂ ಸಂಬಂಧಿಕರಿಲ್ಲ’. ಅವರ ಈ ಮಾತಿನಿಂದ ನನಗೆ ಆಶ್ಚರ್ಯವಾಯಿತು.

‘ಬೆಂಗಳೂರಿಗೆ ಹೋಗಲು ಭಯವಾಗುವುದಿಲ್ಲವೇ?’ ಕೇಳಿದೆ.

‘ಇಲ್ಲ, ನಾವು ಮೂವರೂ ಜೊತೆಗಿದ್ದೇವಲ್ಲ, ಎಲ್ಲವನ್ನೂ ಫೇಸ್ ಮಾಡ್ತೀವಿ’, ಒಬ್ಬಳು ಆತ್ಮವಿಶ್ವಾಸದಿಂದ ಹೇಳಿದಳು.

ನಾನು ಆ ಮೂವರ ಮುಖವನ್ನೇ ನೋಡುತ್ತಿದ್ದೆ. ಅವರ ಮುಖದಲ್ಲಿ ಅಪಾರ ಆತ್ಮವಿಶ್ವಾಸವಿತ್ತು. ಈ ಹುಡುಗಿಯರು ‘ಸರ್ವೈವ್’ ಮಾಡಿಕೊಳ್ಳುತ್ತಾರೆ ಎಂದು ಅನ್ನಿಸಿತು. ಇವರು ಸೈಬರ್ ಕಾಲದ ಸಾಹಸಿ ಹುಡುಗಿಯರು. ಆದರೆ ಅವರ ತಂದೆತಾಯಿ? ಅವರು ಇವರನ್ನು ಒಂಟಿಯಾಗಿ ಹೋಗಲು ಹೇಗೆ ಬಿಟ್ಟರು? ಅಪರಿಚಿತ ನಗರ, ಅಪರಿಚಿತ ಜನ, ಇವರು ಕೆಲಸ ಮಾಡಬೇಕಾದ ಅಪರಿಚಿತ ಕಂಪನಿ... ಮೂವರಿಗೆ ಐದೈದು ಲಕ್ಷದ ಪ್ಯಾಕೇಜ್ ಸಿಕ್ಕಿತ್ತು. ಅವರ ಲೆಕ್ಕದಲ್ಲಿ ಇದು ಕಡಿಮೆ ಸಂಬಳವಾಗಿತ್ತು. ಆದರೆ ಆರಂಭ ಮತ್ತು ಅನುಭವ ಪಡೆಯಲೋಸುಗ ಆ ಸಂಬಳ ಯಥೇಷ್ಟವಾಗಿತ್ತು.

ಈ ಬಂಡವಾಳಶಾಹಿ ಕಾಲದ ಕಂಪನಿಗಳು ಹೀಗೆಯೇ ಯುವಕರ ಅದಮ್ಯ ಶಕ್ತಿಯನ್ನು ಹಿಂಡುತ್ತಾ, ತಮ್ಮ ಲಾಭವನ್ನು ಮಾಡಿಕೊಳ್ಳುತ್ತವೆ. ಸೆಮಿನಾರಿಗೆ ಬೇರೆಬೇರೆ ಪ್ರದೇಶಗಳಿಂದ ಅನೇಕ ಜನ ಬಂದಿದ್ದರು. ಅವರಲ್ಲಿ ಒಬ್ಬ ಸಜ್ಜನರು ಒಂದು ಸಂಜೆ ದಾರ್ಶನಿಕರಾಗಿ ಹೇಳಿದರು, ‘ಇಂದಿನ ಹುಡುಗಿಯರು ಭ್ರಷ್ಟರಾಗಿದ್ದಾರೆ. ಸ್ಕಿನ್‌ಟೈಟ್ ಜೀನ್ಸ್ ಮತ್ತು ಟಾಪ್ ಧರಿಸಿ, ಹುಡುಗರೊಂದಿಗೆ ಅಲೆಯುತ್ತಾರೆ. ಅವರಿಗೆ ತಮ್ಮ ತಂದೆತಾಯಿಯ ಪ್ರತಿಷ್ಠೆ ಗಮನಕ್ಕೇ ಬರುವುದಿಲ್ಲ.

‘ಈಗ ನಿಮ್ಮ ಮಗಳು ಎಲ್ಲಿದ್ದಾಳೆ?’ ಈಗ ನನಗೆ ನೆನಪಾಯಿತು, ಅವರಿಗೆ ಇಬ್ಬರು ಮಕ್ಕಳಿದ್ದು, ಒಂದು ಗಂಡು, ಒಂದು ಹೆಣ್ಣು ಎಂದು ಅವರು ಹೇಳಿದ್ದರು. ಮಗ ಅಮೆರಿಕದಲ್ಲಿದ್ದಾನೆ, ಮಗಳು ಪುಣೆಯ ಒಂದು ಪ್ರೈವೇಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾಳೆ. ಅವಳ ಕಂಪನಿ ಅವಳನ್ನು ಶೀಘ್ರವೇ ವಿದೇಶಕ್ಕೆ ಕಳುಹಿಸುತ್ತಿದೆ ಎಂದೂ ಹೇಳಿದ್ದರು.

‘ಅವಳು ಪೂನಾದಲ್ಲಿದ್ದಾಳೆ’

‘ಅವಳ ಜೊತೆ ಯಾರಿದ್ದಾರೆ?’

‘ಸದ್ಯಕ್ಕೆ ಒಬ್ಬಳೇ ಇದ್ದಾಳೆ, ಅವಳ ತಾಯಿ ನಾಲ್ಕೈದು ದಿನಗಳಿದ್ದು ಮರಳಿ ಬಂದಿದ್ದಾಳೆ.’

‘ಒಂಟಿಯಾಗಿದ್ದಾಗ, ಅವಳಿಗೆ ವಿಘ್ನಗಳು ಬಂದರೆ, ನಿಮ್ಮ ಅಭಿಪ್ರಾಯದಂತೆ ಅವಳು ಆತ್ಮಹತ್ಯೆ ಮಾಡಿಕೊಳ್ಳಬೇಕು ಅಥವಾ ಅಂಥ ಪರಿಸ್ಥಿತಿಯಿಂದ ಪಾರಾಗಲು ಸಾಧ್ಯವಾದದ್ದನ್ನೆಲ್ಲಾ ಅವಳು ಮಾಡಬೇಕಾ?’

‘ಆತ್ಮಹತ್ಯೆ ಏಕೆ ಮಾಡಿಕೊಳ್ಳಬೇಕು? ಜೀವನ ಪದೇ ಪದೇ ಸಿಗಲ್ಲ’, ಅವರು ಸ್ವಲ್ಪ ತಡಬಡಿಸಿದರು.

‘ಇಲ್ಲೇ ಇರೋದು! ಇವತ್ತು ಚೆನ್ನಾಗಿ ಸಂಪಾದನೆ ಮಾಡುವ ತಂದೆತಾಯಿ ಯಾವುದೇ ಆರ್ಥಿಕ ವಿವಶತೆಯಿಲ್ಲದೆ ತಮ್ಮ ಹೆಣ್ಣು ಮಕ್ಕಳನ್ನು ಹಣ ಸಂಪಾದನೆಗೆ ದೇಶವಿದೇಶಗಳ ಮೂಲೆ ಮೂಲೆಗೆ ಕಳುಹಿಸುತ್ತಾರೆ. ಅವಳು ಅಲ್ಲಿಯ ವಿಷಮ ಪರಿಸ್ಥಿತಿಗಳಲ್ಲಿ ಯಾವ ರೀತಿಯಲ್ಲಿ ಹೋರಾಡ್ತಾಳೋ, ಅದು ಅವಳಿಗೇ ಗೊತ್ತು. ಅವರಿಗೆ ದೂಷಿಸುವುದರಿಂದ ಯಾವ ಲಾಭವಿಲ್ಲ’. ನಂತರ ನಾನು ಅವರಿಗೆ, ನಾನು ಬೆಂಗಳೂರಿಗೆ ಬರುವಾಗ ರೈಲಿನಲ್ಲಿ ಭೇಟಿಯಾಗಿದ್ದ ಆ ಮೂವರು ಹುಡುಗಿಯರ ಬಗ್ಗೆ ಹೇಳಿದೆ. ಅವರು ನಿರುತ್ತರರಾದರು.

ವಾಸ್ತವವಾಗಿ ನಾವು ಪ್ರತಿಯೊಂದರಲ್ಲೂ ದ್ವಿಮುಖತನದಲ್ಲಿ ಬದುಕುತ್ತೇವೆ. ನಮ್ಮ ಲಾಭ ನಮಗೆ ವಿಧಿವತ್ತಾಗಿ ತೋರುತ್ತದೆ, ನಮ್ಮ ಯಶಸ್ಸು ನಮಗೆ ನ್ಯಾಯಬದ್ಧವೆಂದು ಅನ್ನಿಸುತ್ತದೆ ಹಾಗೂ ನಮ್ಮ ಜೀವನ ನಮಗೆ ಸಾಮಾಜಿಕವೆಂದು ತೋರುತ್ತದೆ. ಇದಕ್ಕೆ ವಿರುದ್ಧವಾಗಿ, ಬೇರೆಯವರ ಲಾಭ, ಬೇರೆಯವರ ಯಶಸ್ಸು ಮತ್ತು ಬೇರೆಯವರ ಜೀವನ ದೋಷಪೂರ್ಣವೆಂದು ಕಾಣ ಬರುತ್ತದೆ. ಸಮಾಜದ ಈ ದ್ವಿಮುಖತನದಿಂದಾಗಿಯೇ ನಾವು ಪದೇ ಪದೇ ಮನೆಯನ್ನು ಬದಲಾಯಿಸಬೇಕಾಗುತ್ತಿತ್ತು. ಜನರಿಗೆ ತಮ್ಮ ಬಗೆಗಿಂತ ಹೆಚ್ಚು ನಮ್ಮ ಚಿಂತೆಯಿತ್ತು.

## ಕಳೆದ ಸಂಚಿಕೆಯಲ್ಲಿ



ರಿತಿಕ್‌ನ ತಾಯಿ ಸುಗಂಧಾಗೆ ಫೋನ್ ಮಾಡಿ ‘ನನ್ನ ಮಗನ ಜೀವನ ಹಾಳು ಮಾಡ್ತಾ ಇದ್ದೀಯಾ, ನಿಂಗೆ ಬೇರೆ ಯಾರು ಸಿಗಲಿಲ್ವಾ ‘ಹಾ...ಗಿತ್ತಿ’ ಎಂದೆಲ್ಲ ಬೈಯುತ್ತಾರೆ. ಮನಸ್ಸು ಬೇಸರದ ಗೂಡಾದಾಗ ಇದನ್ನು ಕಚೇರಿಯಲ್ಲಿ ಆಪ್ತೆ ಕೀರ್ತಿ ಬಳಿ ಹೇಳಿ ಸುಗಂಧಾ ಮನಸ್ಸು ಹಗುರಾಗಿಸಿಕೊಳ್ಳುತ್ತಾಳೆ. ಸಿಕವಾರರು ಸುಗಂಧಾ ಪರವಾಗಿ ಮಾತನಾಡುತ್ತಾರೆ. ಸುಗಂಧಾ ಕಚೇರಿಯಲ್ಲಿ ಕುಳಿತಾಗ ಭೋಪಾಲ್‌ನಲ್ಲಿ ಪಲ್ಲವಿ–ದೀಪಕ್ ಮಿಶ್ರಾ ಮದುವೆಯಾದದ್ದು, ವರದಕ್ಷಿಣೆಗಾಗಿ ದೀಪಕ್ ಮನೆಯವರು ಪಲ್ಲವಿಯನ್ನು ಸುಟ್ಟು ಕೊಂದಿದ್ದು, ಹಣ ಬಲದಿಂದ ಕಾನೂನಿನಿಂದ ಶಿಕ್ಷೆಯಿಂದ ತಪ್ಪಿಸಿಕೊಂಡು ಮತ್ತೆ ಮದುವೆಯಾದದ್ದು ಎಲ್ಲ ನೆನಪಾಗುತ್ತದೆ. ಈ ಮಧ್ಯೆ ರಿತಿಕ್‌ನ ತಾಯಿ ಫೋನ್ ಮಾಡಿದ ವಿಚಾರವನ್ನು ಮನಸ್ಸಿನ ದ್ವಂದ್ವದ ನಡುವೆಯೂ ಆತನಿಗೆ ತಿಳಿಸುತ್ತಾಳೆ. ಅದೇ ರೀತಿ ಸುಗಂಧಾ ತಾಯಿಗೂ ಇವರಿಬ್ಬರ ಸಂಬಂಧದ ವಿಚಾರ ತಿಳಿದು ಮನೆಗೇ ಬಂದು ವಿಚಾರಿಸುತ್ತಾರೆ. ರಿತಿಕ್‌ನನ್ನು ಇಷ್ಟಪಡುವುದಾದರೆ ಮದುವೆಯಾಗುವಂತೆ ಸುಗಂಧಾಳನ್ನು ಒತ್ತಾಯಿಸುತ್ತಾರೆ. ತಾಯಿಯ ಮಾತಿಗೆ ಸುಗಂಧಾ ಸಮ್ಮತಿ ಸೂಚಿಸುವುದಿಲ್ಲ.

ಹೊಸ ಮನೆಯಲ್ಲಿ ನಮ್ಮ ಸಾಮಾನುಗಳನ್ನು ಜೋಡಿಸಿಟ್ಟ ನಂತರ, ನಾವು ನಮ್ಮ ಕೆಲವು ಮಿತ್ರರನ್ನು ‘ರಾತ್ರಿಭೋಜನ’ಕ್ಕೆ ಆಹ್ವಾನಿಸಿದೆವು. ಅವರು ನಮ್ಮ ಜೀವನಶೈಲಿಯನ್ನು ಸಮರ್ಥಿಸುವವರಾಗಿದ್ದರು. ಅವರಲ್ಲಿ ಶಿವಿರ ಸಹ ಒಬ್ಬನಾಗಿದ್ದ. ಅವನ ಹೆಸರು ವಿಚಿತ್ರವಾಗಿತ್ತು, ಆದರೆ ಶಿವಿರ ಒಳ್ಳೆಯ ಮನುಷ್ಯನಾಗಿದ್ದು, ಸದಾ ಹಸನ್ಮುಖಿಯಾಗಿರುತ್ತಿದ್ದ.

‘ರಿತಿಕ್‌ನನ್ನು ಬಿಟ್ಟು ನನ್ನ ಬಳಿಗೆ ಬರುವ ಮನಸ್ಸಾದರೆ, ಬಂದು ಬಿಡಿ, ನಿಮ್ಮನ್ನು ಮನಸಾರೆ ಪ್ರೀತಿಸುತ್ತೇನೆ’, ಶಿವಿರ ನಕ್ಕು ಹೇಳುತ್ತಿದ್ದ. ರಿತಿಕ್ ಎದುರೇ ಹೇಳುತ್ತಿದ್ದ. ಅವನ ಮನಸ್ಸಿನಲ್ಲಿ ಕೊಳಕಿರಲಿಲ್ಲ. ಅವನಿಗೆ ತಮಾಷೆ ಮಾಡುವುದು ಇಷ್ಟವಾಗಿತ್ತು. ಇದು ರಿತಿಕ್‌ಗೂ ಗೊತ್ತಿತ್ತು, ನನಗೂ ಗೊತ್ತಿತ್ತು.

‘ನಾನು ಆ ದಿನವನ್ನೇ ಕಾಯ್ತಿದ್ದೇನೆ. ಕಡೇಪಕ್ಷ ಇನ್ನೊಬ್ಬಳನ್ನು ಇಟ್ಕೋಬಹುದು,’ ರಿತಿಕ್ ಅವನ ತಮಾಷೆಗೆ ಧ್ವನಿಗೂಡಿಸುತ್ತಿದ್ದ. ನಾನೂ ನಗುತ್ತಿದ್ದೆ. ಆದರೂ ಮನಸ್ಸಿನ ಮೂಲೆಯೊಂದರಲ್ಲಿ ‘ಇಟ್ಕೋಬಹುದು’ –ಈ ಶಬ್ದಗಳು ಮುಳ್ಳಿನಂತೆ ಚುಚ್ಚುತ್ತಿದ್ದವು. ನೀನು ನನ್ನನ್ನು ‘ಇಟ್ಟುಕೊಂಡಿದ್ದೀಯ?’, ನಾನು ನಿನ್ನ ‘ಸೂಳೆ’ಯೇ? ಒಂದು ಹೆಣ್ಣನ್ನು ಇಟ್ಟುಕೊಳ್ಳುವ ಅರ್ಥ ನಿನಗೆ ತಿಳಿದಿದೆಯೇ? ಎಂದು ಕೂಡಲೇ ಕೇಳಲು ಮನಸ್ಸಾಗುತ್ತಿತ್ತು. ರಕ್ಷಿಸಲ್ಪಟ್ಟವಳಿಗೆ ಇಂಥ ಶಬ್ದವನ್ನು ಬಳಸಲಾಗುತ್ತದೆ, ರಿತಿಕ್ ನನ್ನನ್ನು ರಕ್ಷಿಸುವನೇ?

ನಾನು ತಮಾಷೆಯ ವಾತಾವರಣ ಹಾಳಾಗುವುದೆಂದು ಯೋಚಿಸಿ ಮೌನ ವಹಿಸುತ್ತೇನೆ. ದಿವ್ಯಾ ಸಹ ನಮ್ಮ ಗೆಳತಿ. ಅವಳು ಸಹ ನಮ್ಮ ಪಾರ್ಟಿಗಳಲ್ಲಿ ಮನಬಿಚ್ಚಿ ಭಾಗವಹಿಸುತ್ತಿದ್ದಳು. ನಾವೆಲ್ಲರೂ ಒಟ್ಟಿಗೆ ಕಲೆತು ಅಡುಗೆ ಮಾಡುತ್ತಿದ್ದೆವು. ಕೆಲವು ತಿನಿಸುಗಳನ್ನು ಪೇಟೆಯಿಂದಲೂ ತರುತ್ತಿದ್ದೆವು. ತುಂಬಾ ಹೊತ್ತು ಹರಟೆ ಹೊಡೆಯುತ್ತಾ ತಿನ್ನುತ್ತಿದ್ದೆವು. ಹನ್ನೆರಡು ಗಂಟೆ, ಒಂದು ಗಂಟೆ, ಎರಡು ಗಂಟೆ ನಮಗೆ ಸಮಯದ ಅರಿವೇ ಆಗುತ್ತಿರಲಿಲ್ಲ. ನಮ್ಮ ಹೊಸ ಮನೆ ಒಂದು ಕಾಲೊನಿಯಲ್ಲಿತ್ತು. ನಮ್ಮ ಮನೆಯ ಮಾಲೀಕ ಅಲ್ಲಿ ವಾಸಿಸುತ್ತಿರಲಿಲ್ಲ. ನಾವು ನಮ್ಮನ್ನು ಕೆಲವು ಮಿತಿಯವರೆಗೆ ಸ್ವತಂತ್ರವಾಗಿದ್ದೇವೆ ಎಂದು ಮನಗಾಣುತ್ತಿದ್ದೆವು.

(ಸಶೇಷ)